INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -1, January-February, 2023,
Page No,30 - 40
Peer -Reviewed, Refereed Journal

# "ಜಾನಪದ ಜಗತ್ತಿನೊಂದಿಗೆ ಮಾಸ್ತರರ ಹೆಜ್ಜೆ ಗುರುತುಗಳು"

ಸುಮಿತ್ರ.[1]

ಮಾನವನ ಉಗಮದೊಂದಿಗೆ ರೂಪುಗೊಂಡು ಮಾನವನ ವಿಕಾಸದೊಂದಿಗೆ ಬದಲಾವಣೆಗೆ ಒಳಪಡುತ್ತಾ ಮೌಖಿಕವಾಗಿ ಪರಂಪರಾಗತವಾಗಿ ಹರಿದು ಬಂದಿರುವಂತಹದ್ದು ಜಾನಪದ. 'ಜನವಾಣಿ ಬೇರು ಕವಿವಾಣಿ ಹೂವು' ಎಂಬಂತೆ ನಮ್ಮಲ್ಲಿ ಸಾಹಿತ್ಯದ ಮೂಲಧಾತು ಜಾನಪದವೇ ಆಗಿದೆ. ಜಾನಪದದ ಸಾರಸತ್ವವನ್ನು ಹೀರಿ ಬೆಳೆದವರು ಜನಪರ ಸಾಹಿತಿಗಳಾಗಿ ನಮ್ಮ ಸಾಹಿತ್ಯಕ ಚರಿತ್ರೆಯಲ್ಲಿ ಎಂದಿಗೂ ಚಿರಸ್ಥಾಯಿಯಾಗಿದ್ದಾರೆ. ನಮ್ಮ ಹಳ್ಳಿಗಾಡಿನ ಮುಗ್ಧ ಶ್ರಮಜೀವಿಗಳ ಅಂತರಾಳದ ಉಸಿರೇ ಆಗಿರುವ ಜಾನಪದಕ್ಕೆ ಎಣೆಯಿಲ್ಲದ ಮೌಲ್ಯವಿದೆ. ಇಂದಿನ ಜಾಗತೀಕರಣ, ಉದಾರೀಕರಣ, ಔದ್ಯೋಗಿಕರಣ ಮೊದಲಾದ ಯಂತ್ರ ನಾಗರೀಕತೆಯ ಶರವೇಗದಲ್ಲಿ ಸಾಗುತ್ತಿರುವ ಸಂದರ್ಭದಲ್ಲಿ ನಮ್ಮ ನಾಡು-ನುಡಿ ಸಂಸ್ಕೃತಿಯ ಅಳಿವು ಉಳಿವಿಗಾಗಿ ಶ್ರಮಿಸಿದ ಹಲವಾರು ವಿದ್ವಾಂಸರಲ್ಲಿ ಎನ್ ಹುಚ್ಚಪ್ಪ ಮಾಸ್ತರರು ಎಲೆ ಮರೆಯ ಕಾಯಿಯಂತೆ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಸಾಮಾಜಿಕ ಕ್ಷೇತ್ರಕ್ಕೆ ವಸ್ತುನಿಷ್ಠವಾಗಿ ತನ್ನದೇ ಆದ ಕೊಡುಗೆಯನ್ನು ನೀಡಿ, ಜಾನಪದ ಸಾರಸ್ವತ ಲೋಕವನ್ನು ಮೌನವಾಗಿಯೇ ಬೆಳಗಿಸಿ ತಮ್ಮ ಹೆಜ್ಜೆ ಗುರುತನ್ನು ಮೂಡಿಸಿದ್ದಾರೆ.

ಮಾಸ್ತರರು ಶಿವಮೊಗ್ಗ ಜಿಲ್ಲೆ ಸಾಗರ ತಾಲ್ಲೂಕಿನ ಕುಗ್ವೆ ಎಂಬ ಕುಗ್ರಾಮವಾದ ದೀವರ ಕುಟುಂಬದಲ್ಲಿ ನೆಲ್ಲೂರು ಹುಚ್ಚಪ್ಪ ಮತ್ತು ಪುಟ್ಟಮ್ಮ ದಂಪತಿಗಳಿಗೆ ಹಿರಿಯ ಮಗನಾಗಿ 1938 ಮೇ 18 ರಂದು ಜನಿಸಿದರು. ಬಾಲ್ಯದಲ್ಲಿಯೇ ಜಾನಪದ ಸಂಪತ್ತು ತಮ್ಮ ಕೌಟುಂಬಿಕ ವಾತಾವರಣದಲ್ಲಿ ದೊರೆತಿದ್ದು, ಮಾಸ್ತರರ ತಾಯಿ ಪುಟ್ಟಮ್ಮ ಅದ್ಭುತ ಹಾಡುಗಾರ್ತಿಯಾಗಿದ್ದು, ಸಂಪ್ರದಾಯ, ಸೋಬಾನೆ, ಬೀಸುವ ಕಲ್ಲು, ನಾಟಿ ಹಾಡುಗಳನ್ನು ಹಾಡುತ್ತಿದ್ದರು.

ತಾಯಿಯೇ ಮೊದಲ ಗುರು ಎಂಬಂತೆ ಮಾಸ್ತರರು ತಾಯಿಯಿಂದ ಹಾಡುವುದನ್ನು ಕಲಿತರು. ಹಾಗೂ ತಂದೆಯವರು ಅಲ್ಪ ಓದುವುದು ಬರೆಯುವುದು ಕಲಿತ್ತಿದ್ದು ನಿತ್ಯ ರಾತ್ರಿ ಪಂಚವಟಿ ರಾಮಾಯಣ ಓದುತ್ತಿದ್ದರಿಂದ ಅದು ಮೇಲೆ ಆದರ್ಶದ ಮುದ್ರೆಯೊತ್ತಿತ್ತು. ಪ್ರಾಥಮಿಕ ಶಿಕ್ಷಣವನ್ನು 'ಕುಗ್ವೆ' ಯಲ್ಲಿ ಮುಗಿಸಿ ಮುಂದಿನ ಓದಿಗಾಗಿ ಸಾಗರದ ಪುರಸಭಾ ಪ್ರೌಢಶಾಲೆಯಲ್ಲಿ ಮೆಟ್ರಿಕ್ಯುಲೇಷನ್

[1].ಸಂಶೋಧನಾ ವಿದ್ಯಾರ್ಥಿ,ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ,ಮಾನಸಗಂಗೋತ್ರಿ,ಮೈಸೂರುವಿಶ್ವವಿದ್ಯಾನಿಲಯ,ಮೈಸೂರು

ಪರೀಕ್ಷೆಯಲ್ಲಿ ಉತ್ತೀರ್ಣರಾದರು. ನಂತರದಲ್ಲಿ ಓದಿಗೆ ವಿರಾಮ ಹಾಕಿ, ತನ್ನ ಸುತ್ತಲಿನ ಯುವಕ ಯುವತಿಯರನ್ನು ಸಂಘಟಿಸಿ ಗ್ರಾಮೋದ್ಧಾರಕ್ಕೆ ನೆರವಾಗಬಲ್ಲ ರಚನಾತ್ಮಕ ಕಾರ್ಯಗಳಿಗೆ ಕೈ ಹಾಕಿದರು. ಕುಗ್ವೆಯಲ್ಲಿ ಯುವಕ ಸಂಘವನ್ನು ಕಟ್ಟಿ ಅನೇಕ ಆದರ್ಶವಾದ ಮತ್ತು ಉಪಯುಕ್ತವಾದ ಕಾರ್ಯಕ್ರಮಗಳನ್ನು ರೂಢಿಸಿ ತಾಲ್ಲೂಕಿಗೆ "ಮಾದರಿ ಯುವಕ ಸಂಘ"ವೆಂಬ ಹೆಗ್ಗಳಿಕೆಗೆ ಪಾತ್ರವಾಗುವಂತೆ ಮಾಡಿದರು.

ತನ್ನ ತಾಯಿಯಲ್ಲಿ ಅಡಗಿದ್ದ ಜಾನಪದ ಪ್ರತಿಭೆಯಿಂದ ಉತ್ತೇಜಿರಾಗಿ 'ಮಹಿಳಾ ಸಮಾಜ' ಸ್ಥಾಪಿಸಿ ಇವರಿಗೆ ವಿಶೇಷವಾದ ಹಸೆ ಚಿತ್ತಾರ ಚಿತ್ರಕಲೆ, ರಂಗವಲ್ಲಿ, ಜಾನಪದ ಹಾಡುಗಳು ಮುಂತಾದ ಕಲೆಗಳತ್ತ ಯುವತಿಯರ ಗಮನ ಸೆಳೆಯುವಂತೆ ಮಾಡಿ ಅವರ ಅಭಿವೃದ್ಧಿಗೆ ಕಾರಣರಾದರು. ಈ ಕೆಲಸಗಳಿಂದಾಗಿ ಅವರಲ್ಲಿ ಸುಪ್ತವಾಗಿದ್ದ ಸಮಾಜ ಸೇವೆಯ ಹಂಬಲ ಮತ್ತಷ್ಟು ಮೊಗದಷ್ಟು ಪುಟಿಯಲಾರಂಭಿಸಿತು. ಈ ಸಂದರ್ಭದಲ್ಲಿ 'ಭಾರತ ಸೇವಕ' ಸಮಾಜದವರು ನಡೆಸುತ್ತಿದ್ದ ಶಾಲೆಯ ಬಡಮಕ್ಕಳಿಗೆ ಹಾಲು ವಿತರಣೆ ಮಾಡುವ ಯೋಜನೆಯ ಬಗ್ಗೆ ತಿಳಿದು ಅದರ ಪ್ರಯೋಜನ ಕುಗ್ವೆಯ ಶಾಲಾ ಮಕ್ಕಳಿಗೂ ದೊರೆಯುವಂತೆ ಮಾಡಿದರು. ಈ ಯೋಜನೆಯನ್ನು ವರಕವಿ ದ.ರಾ. ಬೇಂದ್ರೆ ದಂಪತಿಗಳನ್ನು ಕರೆಸಿ ಉದ್ಘಾಟಿಸಿದ ಕೀರ್ತಿಗೆ ಮಾಸ್ತರರು ಪಾತ್ರರಾದರು.

ಹೀಗಿರುವಾಗಲೇ ಇವರ ಜೀವನದಲ್ಲಿ ಮಹತ್ವದ ತಿರುವು ಉಂಟಾಯಿತು. ಅದೇನೆಂದರೆ 'ಕರ್ನಾಟಕ ರಾಜ್ಯದ ವಯಸ್ಕರ ಶಿಕ್ಷಣ ಸಮಿತಿ'ಯ ಗ್ರಾಮೀಣಾ ಯುವಕರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸಲೆಂದು  ಹಿಂದಿನ ಕುರುಕಲ ಮಾದರಿಯಲ್ಲಿ ಕೆಲವು ವಿದ್ಯಾಪೀಠಗಳನ್ನು ನಡೆಸುತ್ತಿತ್ತು. ಸಾಗರದಲ್ಲಿ ಈ ಸಮಿತಿಯು ಸಂಚಾಲಕರಾಗಿದ್ದ ಶ್ರೀ ನರಸಿಂಹ ಪ್ರಭುಗಳು ಹುಚ್ಚಪ್ಪನವರ ಕಾರ್ಯ ವೈಖರಿಯನ್ನು ಕಂಡು ತರಬೇತಿಗಾಗಿ ಹಾಸನದ ವಿದ್ಯಾಪೀಠಕ್ಕೆ ಕಳಿಸಿಕೊಟ್ಟರು. ಅಲ್ಲ ಗಾಂಧೀಜಿಯ ತತ್ವಾದರ್ಶಗಳನ್ನು ಮೈಗೂಡಿಸಿಕೊಂಡಿದ್ದು ಶ್ರೀ ಟಿ.ಆರ್. ಗೋವಿಂದರಾಯರು ಪ್ರಿನ್ಸಿಪಾಲರಾಗಿದ್ದರು. ಈ ವಿದ್ಯಾಪೀಠದ ಪರಿಸರ ಅಲ್ಲಿನ ತರಬೇತಿ ಮತ್ತು ಗೋವಿಂದರಾಯರು ತೋರಿದ ವಿಶೇಷ ವಾತ್ಸಲ್ಯ ಹಾಗು ಮಾರ್ಗದರ್ಶನ ಇವರ ಅಂತರಂಗದ ಕದವನ್ನು ತಟ್ಟಿದವು. ಅಲ್ಲಿ ಕೋಲಾಟ ನೇಯ್ಗೆ ನೂಲುವುದು ಕರಕುಶಲ ವಸ್ತುಗಳ ತಯಾರಿಕೆಯೊಂದಿಗೆ ಹೊಸ ಹೊಸ ವಿಷಯಗಳನ್ನು ಕಲಿತರು. ಅಲ್ಲದೆ ಸಮಾಜ ಸೇವೆಯ ನಾನಾ ಮುಖಗಳ ಪರಿಚಯವಾಯಿತು. ಕರ್ನಾಟಕ ರಾಜ್ಯದ ಅನೇಕ ಹಿರಿಯರ, ಪ್ರಮುಖ ನೇತಾರರ ಅಧಿಕಾರಿಗಳ ಒಡನಾಟ ಲಭ್ಯವಾಯಿತು. ಇವರೆಲ್ಲರ ಸಂಪರ್ಕದ ಫಲವಾಗಿ ಯಾರ ಜೊತಗಾದರೂ ಸಂಪರ್ಕಿಸುವ ಆತ್ಮಸ್ಥೈರ್ಯ ನೆಲಗೊಂಡು ಅಂತರಂಗದಲ್ಲಿ ಹುದುಗಿದ್ದ ಆದರ್ಶಗಳು

ಇನ್ನಷ್ಟು ಗಟ್ಟಿಗೊಂಡು ಸಂಪದ್ಭರಿತ ಯುವಕರಾಗಿ ಅನೇಕ ಕನಸ್ಸುಗಳನ್ನು ಹೊತ್ತು ತಮ್ಮ ಹಳ್ಳಿಗೆ ಮರಳಿದರು.

ತಮ್ಮ ಕನಸ್ಸುಗಳನ್ನು ಸಕಾರಗೊಳಿಸುವ ಆಕಾಂಕ್ಷೆ ಮತ್ತು ಹೊಣೆಗಾರಿಕೆಗಳೊಂದಿಗೆ ಉತ್ಸಾಹ ತುಂಬಿ ತುಳುಕುತ್ತಿದ್ದೆ ಸಂದರ್ಭದಲ್ಲಿ ಸಾಮಾನ್ಯವಾಗಿ ಹರಿಜನರಿಗೆ ಮೀಸಲಾಗಿದ್ದ. ದೀವರಿಗೆ ಗೊತ್ತಿಲ್ಲದ ಕೋಲಾಟವನ್ನು ಊರಿನ ಯುವಕರನ್ನು ಸಂಘಟಿಸಿ ಅವರಿಗೆ ಕೋಲಾಟ ಕಲಿಸಿದರು. ಹಾಗೂ ಕೋಲಾಟದ ತಂಡವನ್ನು ಕಟ್ಟಿ ಹಳ್ಳಿ ಹಳ್ಳಿಗಳಲ್ಲಿ ಜಗಪ್ರಿಯೆಗೊಳಿಸಿದರು. 'ದೀವರು ಕೋಲಾಟವಡುವುದೇ? ಎಂದು ಅಸಡ್ಡೆ ತೋರಿದವರು ಕೂಡ ಕೋಲಾಟವನ್ನು ಮೆಚ್ಚುವಂತೆ ಮಾಡಿದರು.

ಗಾಂಧೀಜಿಗೆ ಬಹಳ ಪ್ರಿಯವಾಗಿದ್ದು ಸ್ವಚ್ಛತೆಯ ಬಗ್ಗೆ ಹಳ್ಳಿಯ ಜನರಿಗೆ ತಿಳಿ ಹೇಳಿ ಸ್ವಚ್ಛತಾ ಯೋಜನೆಯ ಅರಿವನ್ನು ಮೂಡಿಸಿದರು ಹರಿಜನರಿಗಾಗಿ ರಾತ್ರಿ ಶಾಲೆ ಆರಂಭಿಸಿದರು. ಅವಿದ್ಯಾವಂತರಾದ ಜನರಲ್ಲಿ ಜ್ಞಾನ ಪ್ರಸಾರ ಮಾಡುವ ಉದ್ದೇಶದಿಂದ ಉಪನ್ಯಾಸಗಳನ್ನು ಏರ್ಪಡಿಸಿದರು. ಊರಿನವರಿಗಾಗಿ ಪುಸ್ತಕ ಭಂಡಾರವೊಂದನ್ನು ಸ್ಥಾಪಿಸಿದರು.

ವಿದ್ಯಾಪೀಠದ ತರಬೇತಿ ಮತ್ತು ಅನುಭವ ಗೋವಿಂದರಾಯರಲ್ಲಿ ಕಂಡ ಆದರ್ಶ ಮತ್ತು ಇವರ ಹೃದಯದಲ್ಲಿ ಮಡುಗಟ್ಟಿದ ಸಮಾಜ ಸೇವೆಯ ಉತ್ಸಾಹಗಳೆಲ್ಲದರ ಫಲಸ್ವರೂಪವಾಗಿ ಹುಚ್ಚಪ್ಪ ಮೇಷ್ಟ್ರಾಗಿ ನಂತರ ಹುಚ್ಚಪ್ಪ ಮಾಸ್ತರರಾಗಿ ರೂಪುಗೊಳ್ಳುವಂತಹ ಘಟನೆಯೊಂದು ನಡೆಯಿತು. ಅದೇ ಆಶ್ರಮ ಶಾಲೆಯ ಅಧ್ಯಾಪಕ ವೃತ್ತಿ, ಸರ್ಕಾರ ಸ್ವಾತಂತ್ರ್ಯ ಬಂದ ಸಂಧರ್ಭದಲ್ಲಿ ಗಿರಿಜನ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಸಾಗರ ತಾಲ್ಲೂಕಿನ ಹಿರೇಮನೆ ಎಂಬ ಊರಲ್ಲಿ ಹಲಸರ (ಗಿರಿಜನರಲ್ಲಿಯೇ ಅತ್ಯಂತ ಹಿಂದುಳಿದ ಜನಾಂಗ) ಮಕ್ಕಳಿಗೊಸ್ಕರ ಗಿರಿಜನ ಆಶ್ರಮ ಶಾಲೆಯೊಂದನ್ನು ಪ್ರಾರಂಭಿಸಿತು. ಆಗ ಇದನ್ನು ವ್ಯವಸ್ಥಿತವಾಗಿ ನಡೆಸಲು ಯೋಗ್ಯ ಶಿಕ್ಷಕರ ನೇಮಕಾತಿಗೆ ಈ ಭಾಗದ ಕ್ಷೇತ್ರಾಭಿವೃದ್ಧಿ ಅಧಿಕಾರಿ ಮತ್ತು ಸಹಾಯಕ ಕಮೀಷನ್ ಹುಡುಕಾಟದಲ್ಲಿದ್ದ ಇವರಿಗೆ ಈ ಹುದ್ದೆಗೆ ಹುಚ್ಚಪ್ಪ ಮಾಸ್ತರರೇ ಅರ್ಹ ಅಭ್ಯರ್ಥಿ ಎಂದು ನಿರ್ಧರಿಸಿದರು. ಅದರಂತೆ ಒಂದು ದಿನ ಮಾಸ್ತರರನ್ನು ಬರಮಾಡಿಕೊಂಡು ಆಶ್ರಮ ಶಾಲೆಯ ಮುಖ್ಯಸ್ಥನಾಗಿ ನಿಮ್ಮನ್ನು ನೇಮಕಾತಿ ಮಾಡುತ್ತೇವೆ. ನಿನ್ನ ಎಸ್.ಎಸ್.ಎಲ್.ಸಿ ಮತ್ತಿತರ ಪ್ರಮಾಣ ಪತ್ರಗಳನ್ನು ಕೊಸುವುದಾಗಿ ಹೇಳಿದರು. ಆದರೆ ಮೊದಲೇ ಯಾವುದೇ ಸರ್ಕಾರಿ ನೌಕರಿಗೆ ಸೇರಬಾರದೆಂದು ನಿರ್ಧರಿಸಿದ ಮಾಸ್ತರರು ಕೇವಲ ಸಾಮಾಜಿಕ ಕಾರ್ಯಕರ್ತನಾಗಿ ಮುಂದುವರಿಯುವ ಇಚ್ಚೇಯಿಂದ ಈ ಪ್ರಮಾಣ ಪತ್ರಗಳು ಅಡ್ಡಿಯಾಗಬಾರದೆಂದು ಅಗ್ನಿಗಾಹುತಿ ಮಾಡಿದ್ದರು ಈ ಮಾಹಿತಿಯನ್ನು ತಿಳಿದ ಅಧಿಕಾರಿಗಳು ಸ್ವತಃ ತಾವೇ ಮುತುವರ್ಜಿ ವಹಿಸಿ ಅವುಗಳ ಪ್ರಮಾಣಿತ

ಪ್ರತಿಗಳನ್ನು ತರಿಸಿಕೊಂಡು ಹುಚ್ಚಪ್ಪನವರಿಗೆ 01–07–1959 ರಂದು ಹಿರೇಮನೆಯ ಆಶ್ರಮ ಶಾಲೆಯ ಶಿಕ್ಷಕರಾಗಿ ನೇಮಿಸಿದರು.

ಕಲಿತಿದ್ದು ಎಸ್.ಎಸ್.ಎಲ್.ಸಿ ಯಾದರೂ ಇವರು ಬೆಳೆದಿದ್ದು ಜಗದಗಲಕ್ಕೆ

ಕುಗ್ರಾಮದ ಹುಚ್ಚಪ್ಪನವರು

ಹಿರಿ ಮನೆಯ ಮಾಸ್ತರರಾದರು

ಅಲ್ಲಿತ್ತು ಹಸಲರೆಂಬ ಅಸ್ಪೃಶ್ಯ ಜಾತಿ

ಗತಿ ನಾಯಿ ನರಿಗಳಿಗೆ ಪ್ರೀತಿ

ಎಲ್ಲರೂ ಉತ್ತಮರ ಸೇವೆಗೈಯುವ ಹುಟ್ಟಾಳುಗಳು

ನಂಬಿದವರಿಗಾಗಿ ದುಡಿಯಬಲ್ಲ ಕಟ್ಟಾಳುಗಳೂ

ಹಸಿದ ಹೊಟ್ಟೆಯ

ದಾಸ್ಯತನ ಒತ್ತೆಯಿಟ್ಟಿತ್ತು ಹೊಕ್ಕುಳಾಳದ ಸ್ವಾಭಿಮಾನ

ಮಾಸಿದ ಬಟ್ಟೆ ಹರಕು

ಚೂರಾದ ಚಿಂದಿ ಬದುಕು

ಸ್ನಾನ ಎಣ್ಣೆ ಕಾಣದ ಮಂಡೆ

ಹರಿದ ಚೊಣ್ಣ ಅಣಕಿಸುವ ಕುಂಡೆ

ಬೆತ್ತಲಾಗಿಹುದಿಲ್ಲಿ ಜೀವನ

ಕತ್ತಲಲ್ಲಿಯೇ ಮೂಕ ರೋದನ ......

ಬಂದರು ಹಿಡಿದು ಬೆಳಕಿನ ದೊಂದಿ

ಕರುಬಿದರು ಒಳಗೊಳಗೆ ಮನುವಾದಿ ಮಂದಿ

ಕಲಿಸಿದರು ಶುಚಿತ್ವದ ಪಾಠ

ಸಹಿಸದಾಯಿತು ಇವರ ಕಾಟ

ಬಿಡಲಿಲ್ಲ ಮಾಡಿಯೇತಿರುವೆನೆಂಬ ಹಠ

ಅಕ್ಷರ ಜ್ಞಾನವೇ ಬದುಕಿಗೆ ದಿಟ

ಶೂದ್ರಾತಿ ಶೂದ್ರರಿಗೂ ಕಲಿಸಿದರು ಸಂಸ್ಕೃತ ಶ್ಲೋಕ

ಜ್ಞಾನ ದೀವಿಗೆಯ ಅಮೃತ ಪಾಕ

ತೋರಿದರು ಗಿರಿ ಕಂದರಗಳಾಚೆಯ ಲೋಕ

ಹೊಸ ಲೋಕಾನುಭವಕ್ಕೆ ಮನ ಮೂಕ

ಛಲವಿರಲು ಸಾಧಕ ನಿಗೇನು ಕೊರತೆ

ಚಿಮ್ಮಿಸಬಲ್ಲ ಬಂಡೆಗಲ್ಲಿನಲೂ ನೀರಿನೊರತೆ

ಕುಗ್ರಾಮದ ಹುಚ್ಚಪ್ಪನವರು ಹಿರಿಮನೆಯ ಮಾಸ್ತರಾದರು

ಕೆ ದಿನೇಶ್‌ರವರು ಮಾಸ್ತರರ ವ್ಯಕ್ತಿತ್ವವನ್ನು ತಮ್ಮ ಕವನದ ಮೂಲಕ ಅನಾವರಣಗೊಳಿಸಿದ ಹಾಗೆ ಜನಪದ, ಸಾಮಾಜಿಕ ಸೇವೆ, ಸಾಹಿತ್ಯ, ಗಾಯನ, ಬೀದಿನಾಟಕ ಹೀಗೆ ಹಲವು ಕ್ಷೇತ್ರದಲ್ಲಿ ತಮ್ಮದೇ ಆದ ಬದುಕನ್ನು ಕಟ್ಟಿದ ಮಾಸ್ತರರು, ಜನಪದ ಗೀತೆ, ಕಂಬಾರಗೀತೆ ಹಾಗೂ ಲಾವಣಿಗಳನ್ನು ಹಾಡುವುದರಲ್ಲು ಹಾಗೂ ಕೋಲಾಟದಲ್ಲೂ ಸಿದ್ದ ಹಸ್ತರಾಗಿದ್ದರು. ಪತ್ನಿ ಗೌರಮ್ಮ ಅವರೊಂದಿಗೆ ಸೇರಿ ಬಿಡಿಸಿದ ಹಸೆ ಚಿತ್ತಾರಗಳು ಹೆಚ್.ಎಲ್. ನಾಗೇಗೌಡರು ರಾಮನಗರದಲ್ಲಿ ಸ್ಥಾಪಿಸಿರುವ 'ಜಾನಪದ ಲೋಕ'ದಲ್ಲಿ ಎಲ್ಲಾರ ಗಮನ ಸೆಳೆಯುವಂತಿದೆ.

ಬಹುಮುಖ ವ್ಯಕ್ತಿತ್ವದ ಹುಚ್ಚಪ್ಪನವರು ಶಿಕ್ಷಕ ವೃತ್ತಿ ಮತ್ತು ಹಸಲರ ಉದ್ಧಾರದಲ್ಲಿ ಉಳಿಯದೆ ತಮ್ಮಲ್ಲಿ ಅಂತರ್ಗತವಾಗಿದ್ದ. ಕಲಾವಿದನ ಪ್ರತಿಭೆಯೂ ಹೊರ ಹೊಮ್ಮಲು ಒಂದು ಮಾರ್ಗ ಕಂಡುಕೊಂಡರು. ಮೊದಲೇ ತಾಯಿಯಿಂದ ಬಳುವಳಿಯಾಗಿ ಬಂದ ಕಂಠಸಿರಿ ಮತ್ತು ಜಾನಪದ ಮೋಹ, ಕೋಲಾಟದ ಪದಗಳ ಮೂಲಕ ಹೊರಜಗತ್ತಿಗೆ ಪರಿಚಯವಾಯಿತು. ಆಶ್ರಯ ಶಾಲೆಯ ಶಿಕ್ಷಕರಾಗುವ ಮೊದಲೇ 'ಕುಗ್ವೆ' ಯಲ್ಲಿ ಯುವಕರ ತಂಡಕಟ್ಟಿ ಕೋಲಾಟವಾಡಿ ಜನಮನ ತಣಿಸಿದ್ದ ಮಾಸ್ತರರು ಆಶ್ರಮ ಶಾಲೆಯ ಮಕ್ಕಳಿಗೂ ಕೋಲಾಟ ಕಲಿಸಿದರು. ಹಾಡೊಂದೆ ಇವರ ಪ್ರತಿಭೆಯಾಗಿರಲಿಲ್ಲ, ರಂಗಭೂವಿಯಲ್ಲಿಯೂ ತಮ್ಮ ಪ್ರತಿಭೆ ಗುರುತಿಸಿಕೊಂಡರು. ಕೋಲಾಟಕ್ಕೆ ಸೀಮಿತವಾಗಿದ್ದು ಇವರ ಕಂಠಸಿರಿ ರಾಜ್ಯಾದ್ಯಾಂತ ಜನಪ್ರಿಯವಾಗುವ ಸುವರ್ಣಾವಕಾಶವು ಒದಗಿ ಬಂದಿತು.

ಹೆಗ್ಗೋಡಿನ ಕೆ.ವಿ. ಸುಬ್ಬಣ್ಣನವರ ನೀನಾಸಂ ರಂಗಸಂಸ್ಥೆಯಿಂದ "ಸಂಗ್ಯಾಬಾಳ್ಯಾ" ನಾಟಕದಲ್ಲಿ ಹಾಡು ಮತ್ತು ನೃತ್ಯ ಪ್ರದಾನದ ಮುಖ್ಯ ನಾಯಕರಾಗಿ ಪ್ರವೇಶಿಸಿದರು. ಸಂಗ್ಯಾಬಾಳ್ಯಾ ನಾಟಕವು ಯಶಸ್ವಿ ಪ್ರದರ್ಶನಗೊಂಡು ನಾಡಿನಾದ್ಯಾಂತ ಪ್ರೇಕ್ಷಕರನ್ನು ಮೆಚ್ಚಿಸಿತು, ನಂತರ ಇವರು 'ನೀನಾಸಂ' ನ ಒಂದು ಅಂಗವಾಗಿ 'ಸಿದ್ಧಿ ಜನಾಂಗದ ಕಪ್ಪು ಜನ ಕೆಂಪು ನೆರಳು' ಮತ್ತು ಶ್ರೀ ಪ್ರಸನ್ನ ರಚಿಸಿ ನಿರ್ದೇಸಿಸಿದ 'ದಂಗೆಯ ಮುಂಚಿನ ದಿನಗಳು' ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡಿದರು.

ರಂಗ ಪ್ರಯೋಗಗಳಲ್ಲಿ ಅನೇಕ ತೆರನಾದ ಹೊಸತನವನ್ನು ತಂದು 'ನೀನಾಸಂ' ನ ಅನುಭವ ಮತ್ತು ಅಂತರಂಗದ ತುಡಿತದಿಂದ ಒಂದು ರಂಗ ತಂಡವನ್ನು ಸಾಗರದಲ್ಲಿ ಶ್ರೀ ಕಾಗೋಡು ಅಣ್ಣಾಜಿಯವರ ಜೊತೆ ಸೇರಿ 'ರಂಗ ಮಂಚ' (ರಿ) ಕಾಗೋಡು ಎಂಬ ರಂಗಸಂಸ್ಥೆಯೊಂದನ್ನು ಸ್ಥಾಪಿಸಿ ಅದರ ಅಧ್ಯಕ್ಷರಾಗಿ ಆಗಿ ಜೋಕುಮಾರಸ್ವಾಮಿ, ನಾಯಿಕತೆ, ಬೆತ್ತಲೆಸೇವೆ ನಾಟಕಗಳಿಗೆ ಸಂಗೀತ

ಸಂಯೋಜಿಸಿದರು. ಹರೇಮನೆಯ ಸುತ್ತಮುತ್ತಲಿನ ಬುಡಕಟ್ಟು ಜನಾಂಗದ ಯುವಕರನ್ನು ಸೇರಿಸಿ 'ಜಾನಪದ ರಂಗ ಸಂಕುಲ' (ರಿ) ಕುಗ್ವೆಯಲ್ಲಿ ರಂಗತಂಡವನ್ನು ಕಟ್ಟಿ ಜಾನಪದ ಪ್ರಧಾನವಾದ 'ಸಂಗ್ಯಾಬಾಳ್ಯಾ' ನಾಟಕವನ್ನು ಸಿದ್ದಪಡಿಸಿ, ಪಾಂಡಿಚೇರಿಯಲ್ಲಿ ನಡೆದ ದಕ್ಷಿಣ ವಲಯ ನಾಟಕೋತ್ಸವದಲ್ಲಿ ಭಾಗವಹಿಸಲಾಗಿ ಈ ನಾಟಕವು ದಕ್ಷಿಣದ ನಾಟಕಗಳಲ್ಲಿಯೇ ಅತ್ಯಂತ ಶ್ರೇಷ್ಠ ನಾಟಕವೆಂದು ಆಯ್ಕೆಯಾಗಿ 1990 ರ ದೆಹಲಿಯಲ್ಲಿ ನಡೆದ 'ಅಖಿಲ ಭಾರತ ನಾಟಕ' ಸಮಾರೋಪದಲ್ಲಿ ಭಾಗವಹಿಸಿ ಜನ ಮೆಚ್ಚುಗೆಗೆ ಪಾತ್ರವಾಯಿತು.

ಹಸಲ ಯುವಕರನ್ನು ಸೇರಿಸಿ 'ಡಾಂಬರು ಬಂದುದು ಎಂಬ ನಾಟಕವನ್ನು ಪ್ರದರ್ಶಿಸುವ ಮೂಲಕ ಯುವಕರಿಗೆ ರಂಗದ ಗೀಳು ಹಿಡಿಸಿದರು. ಬುಡಕಟ್ಟು ಜನಾಂಗದವರಿಂದ 'ಕಡ್ಲಿ ಮೆಟ್ಟಿ ಸ್ಟೇಷನ್ ಮಾಸ್ತರ್'. ಎಂಬ ನಾಟಕವನ್ನು ಬೆಂಗಳೂರು ದೂರದರ್ಶನದಲ್ಲಿ ಪ್ರದರ್ಶನಗೊಳ್ಳುವಂತೆ ಮಾಡಿದರು. ಇಂದು ಜನ ಸಂಘ-ಸಂಸ್ಥೆಗಳು ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಹುಚ್ಚಪ್ಪ ಮಾಸ್ತರರನ್ನು ಮುಖ್ಯವಾಗಿ ಗುರುತಿಸುವುದು ಒಬ್ಬ "ಜಾನಪದ ತಜ್ಞ" ಎಂಬುದಾಗಿ ಚಿಕ್ಕಂದಿನಲ್ಲಿ ಚಿಕ್ಕಪ್ಪನೊಂದಿಗೆ ಹೋಗಿ ನೋಡಿ ಆನಂದಿಸಿದ 'ಮೂಡಲಪಾಯ' ಮತ್ತು ಯಕ್ಷಗಾನ, ಬಯಲಾಟಗಳು ಅವರಿಗೆ ಜಾನಪದತ್ತ ಒಲವು ಮೂಡಲು ಕಾರಣವಾಯಿತು. ಜೊತೆಗೆ ತಾಯಿಯ ಮಧುರ ಕಂಠದಿಂದ ರಸಧಾರೆಯಾಗಿ ಹರಿಯುತ್ತಿದ್ದ ಜಾನಪದ ಕಥನಗೀತೆಗಳು ಸಂಪ್ರದಾಯದ ಹಾಡುಗಳು ಇವರ ಜಾನಪದ ಮೋಹಕ್ಕೆ ನೀರೆದವು. ಕೊನೆಗೆ ಕಾಯಕಕ್ಕೆ ಆಯ್ದುಕೊಂಡ ಆಶ್ರಮ ಶಾಲೆ ಮತ್ತು ಅಲ್ಲಿನ ಹಸಲರ ಬಗ್ಗೆ ಒಡನಾಟವು ಹಸಲರ ಬಗ್ಗೆ ಅರಿತುಕೊಳ್ಳಲು ಪ್ರೇರಣೆಯಾಯಿತು. ಇದರೊಂದಿಗೆ ಸಾಹಿತಿ ಮಿತ್ರರ ಸಾಹಿತ್ಯ ಕೃಷಿಗಾಗಿ ಗಿರಿಜನರ ಬದುಕಿನ ಆಳ ಅಗಲಗಳನ್ನು ತಿಳಿಯಲು ನೆಡೆಸಿದ ಸುತ್ತಾಟದಿಂದ ಜಾನಪದ ಪ್ರಜ್ಞೆ ಜಾಗೃತಗೊಳಿಸಿತು. ಹಾಗಾಗಿ ಜಾನಪದವನ್ನು ತಮ್ಮ ಅಧ್ಯಯನದ ಕ್ಷೇತ್ರವನ್ನಾಗಿ ಆಯ್ದುಕೊಂಡರು ಅದರಲ್ಲಿ ಸಾಕಷ್ಟು ಪಾಂಡಿತ್ಯವನ್ನು ಅರ್ಜಿಸಿದರು.

ದೀವರ ಜನಾಂಗ ಮತ್ತು ವೃತ್ತೀಯ ಮೂಲಕ ಒಡನಾಡಿದ 'ಹಸಲರ ಸಮುದಾಯದ ಸಂಸ್ಕೃತಿಯನ್ನು ನೇರವಾಗಿ ಅನುಭವಿಸಿದ್ದರಿಂದ ಉಂಟಾದ ಆಸಕ್ತಿ ಆ ಜಾನಪದ ಸಂಸ್ಕೃತಿಯ ದಾಖಲಾತಿಗೆ ಕಾರಣವಾಯಿತು. ಡಾ॥ ನಾ. ಡಿಸೋಜಾ ರವರ ಸ್ನೇಹದೊಂದಿಗೆ ನಡೆಸಿದ ಓಡಾಟಗಳು ಒಂದು ನಿರ್ದಿಷ್ಟ ಗುರಿಯನ್ನು ತೋರಿಸಿದವು. ಬೆಂಗಳೂರು ಸಮೀಪದ ರಾಮನಗರದಲ್ಲಿ 'ಜಾನಪದ ಲೋಕ'ವನ್ನು ಕಟ್ಟಿ ಅಲ್ಲಿ ಕರ್ನಾಟಕದ ಎಲ್ಲಾ ಜಿಲ್ಲೆಗಳ ಜನಪದ ಸೊಬಗನ್ನು ಬಿಂಬಿಸಲು ಹೊರಟ ನಿವೃತ್ತ ಐ.ಎ.ಎಸ್ ಅಧಿಕಾರಿಯಾದ ಡಾ॥ ಹೆಚ್.ಎಲ್. ನಾಗೇಗೌಡರೊಂದಿಗೆ ಶಿವಮೊಗ್ಗ ಮತ್ತು ಉತ್ತರಕನ್ನಡ ಜಿಲ್ಲೆಗಳನ್ನು ಸುತ್ತಿ ಅಲ್ಲಿನ ಬುಡಕಟ್ಟು ಜನಾಂಗ ಮತ್ತು ಹವ್ಯಕರು ಸೇರಿದಂತೆ ಅನೇಕ ಸಮುದಾಯದವರಿಂದ ಜಾನಪದ ವಸ್ತುಗಳನ್ನು ಸಂಗ್ರಹಿಸಿ ಕಳಿಸಿದರು. ಈ ಜಾನಪದ ಲೋಕ

ಸದಸ್ಯರಾಗಿ 15 ವರ್ಷಗಳ ಕಾಲ ಸೇವೆ ಸಲ್ಲಿಸುತ್ತಾ ನಾನಾ ರೀತಿಯ ನೆರವಿತ್ತರು. ಈ ಅವಧಿಯಲ್ಲಿ ಕುಡುಬಿಗಳು, ಗೊಂಡರು, ಹಸಲರು, ದೀವರು, ಹಾಲಕ್ಕಿಗಳು ಮುಂತಾದ ಹಿಂದುಳಿದ ಬುಡಕಟ್ಟು ಸಮುದಾಯಗಳ ಹಬ್ಬಗಳ ಆಚರಣೆ ಮತ್ತು ಇತರ ಸಂಪ್ರದಾಯಗಳನ್ನು ಚಿತ್ರೀಕರಿಸಿ, ಅಮೂಲ್ಯವಾದ ಜಾನಪದ ದಾಖಲೆಗಳ ಗಣಿಯಾಗುವಂತೆ ನೆರವಾದರು.

ದೀವರಿಗೆ ಮುಖ್ಯವಾದ ಹಬ್ಬಗಳೆಂದರೆ ಗೌರಿಹಬ್ಬ, ಭೂಮಿ ಹುಣ್ಣಿಮೆ ಹಬ್ಬ ಮತ್ತು ದೀಪಾವಳಿ ಈ ಹಬ್ಬಗಳ ಅಚರಣೆಯನ್ನು ಸಮಗ್ರವಾಗಿ ವಿಡಿಯೋ ಚಿತ್ರೀಕರಣ ಮಾಡಿ ದಾಖಲಿಸಿದರು. ಈ ಹಬ್ಬಗಳಲ್ಲಿ ಮುಖ್ಯವಾದ ಅಂಶವೆಂದರೆ 'ಹಸೆ ಚಿತ್ರಕಲೆ' ಮನೆಯ ಗೋಡೆಗಳ ಮೇಲೆ ಬಾಗಿಲುಗಳ ಸುತ್ತಲೂ ಮತ್ತು ದೀಪಾವಳಿಯಂದು ಹಸುಗಳಿರುವ ಕೊಟ್ಟಿಗೆಯ ಗೋಡೆಗಳ ಮೇಲೆ ಬರೆದಿರುವ ಹಸೆ ಚಿತ್ತಾರ ವಿಶಿಷ್ಟ ಕಲೆಯಾಗಿದೆ. ಅಶ್ವಯುಜ ಶುದ್ಧ ಪೌರ್ಣಮಿಯಂದು ಆಚರಿಸುವ 'ಭೂಮಿ ಹುಣ್ಣಿವೆಯ ದಿನ ತಮ್ಮ ಹೊಲಗಳಿಗೆ ಊಟವನ್ನು ಒಯ್ಯಲು ಬಳಸುವ ಬುಟ್ಟಿಯು ವಿಶೇಷವಾದದು  ನಾನಾ ಬಗೆಯ ಹಸೆಯ ಚಿತ್ತಾರದಿಂದ ಶೃಂಗಾರಗೊಂಡು ಆ ಬುಟ್ಟಿಗೆ 'ಭೂಮಿ ಹುಣ್ಣೆಮೆ ಬುಟ್ಟಿ' ಎಂದೇ ಕರೆಯಲಾಗುವುದು. ಅಷ್ಟೆ ಅಲ್ಲದೆ ತಾಳಗುಪ್ಪದಲ್ಲಿ ಮಿತ್ರರೊಂದಿಗೆ ಸೇರಿ 'ಮಲೆನಾಡು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯನ್ನು ಸ್ಥಾಪಿಸಿ ಅದರ ಪ್ರಧಾನ ಕಾರ್ಯದರ್ಶಿಯಾಗಿ ಉತ್ತಮ ಕಾರ್ಯನಿರ್ವಹಿಸಿದರು. 1994 ರಲ್ಲಿ ತಾಳಗುಪ್ಪದಲ್ಲಿ ಅಂತರ್ ಜಿಲ್ಲಾ ಜಾನಪದ ಕಲಾಮೇಳವನ್ನು ಸಂಘಟಿಸಿ ಸಾಗರದಲ್ಲಿ ಅಖಿಲ ಕರ್ನಾಟಕ ಗಿರಿಜನ ಜಾನಪದ ವಿಚಾರ ಸಂಕೀರ್ಣವನ್ನು ಏರ್ಪಡಿಸಿದರು. ಆ ಸಂದರ್ಭದಲ್ಲಿ ನಾಡಿನ ಖ್ಯಾತ ಜಾನಪದ ತಜ್ಞರಾದ ಡಾ॥ ಜಿ.ಶಂ. ಪರಮಶಿವಯ್ಯ, ಡಾ॥ ಹೆಚ್.ಹೆಲ್ ನಾಗೇಗೌಡ ಮತ್ತು ಶ್ರೀ ಜಿ.ಹೆಚ್. ಪಟೇಲರು ಕೂಡ ಭಾಗವಹಿಸಿದರು.

ಇವರ ಜಾನಪದದ ಆಸಕ್ತಿ ಸಮ್ಮೇಳನ ಹಾಗು ವಿಚಾರ ಸಂಕೀರಣಗಳ ಸಂಘಟನೆಗಳಿಗಷ್ಟೇ ಸೀಮಿತವಾಗಿರಲಿಲ್ಲ ತಾವು ಗಳಿಸಿದ ಜ್ಞಾನವನ್ನು ಬರಹ ರೂಪದಲ್ಲಿ ದಾಖಲಿಸಿದರು. 1985 ರಲ್ಲಿ ಮೈಸೂರಿನಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲಿ "ಶಿವಮೊಗ್ಗ ಜಿಲ್ಲೆಯ ಜನಪದ ಕಲೆಗಳು" ಎಂಬ ಪ್ರಬಂಧ ಮಂಡನೆ ಶಿವಮೊಗ್ಗ ಮಲ್ಲಾಪುರ, ಶ್ರೀರಂಗಪಟ್ಟಣ ಮುಂತಾದೆಡೆ ಗೊಂಡರು, ಗಿರಿಜನ ಸಮುದಾಯದಲ್ಲಿ ಜಾನಪದ ರಂಗಭೂಮಿ, ಜನಪದ ಕಲೆಗಳು ವಿಚಾರಗಳ ಪ್ರಬಂಧ ಮಂಡಿಸಿದರು. ಓದಿದ್ದು ಅಲ್ಪ, ವೃತ್ತಿ ಪ್ರಾಥಮಿಕ ಶಾಲೆಯ ಉಪಾಧ್ಯಾಯರು ಆದರೆ ಇವರು ಶಿವಮೊಗ್ಗ ಮತ್ತು ಬೆಂಗಳೂರುಗಳ ಜಾನಪದ ವಿಚಾರವಾಗಿ ಉಪನ್ಯಾಸ ಹಾಗೂ ಪ್ರತ್ಯಕ್ಷಿಕೆಗಳ ಮೂಲಕ ವಿಜೃಂಭಿಸಿದ್ದ ಸಾಮಾನ್ಯವಾದ ಸಂಗತಿಯಲ್ಲಿ, ಅದರಲ್ಲೂ ವಿಶ್ವವಿದ್ಯಾಲಯಗಳ ಪ್ರಾಧ್ಯಾಪಕರುಗಳೇ ಭಾಗವಹಿಸುವಂತಹ ಜಾನಪದ ವಿಚಾರ ಸಂಕೀರಣಗಳ ಸಮಾವೇಶಗಳಲ್ಲಿ ಹಾಗೂ ಕಾರ್ಯಾಗಾರಗಳಲ್ಲಿ ಇವರನ್ನು ವಿಶೇಷ ಆಹ್ವಾನಿತರಾಗಿ ಕರ್ನಾಟಕದ ನಾನಾ ಕಡೆ ಭಾಗವಹಿಸುತ್ತಿದ್ದು ಅಸಾಮಾನ್ಯವಾದದು.

ಇಷ್ಟಕ್ಕೆ ಇವರ ಜಾನಪದ ಸೇವಾದಾಹ ನಿಲ್ಲಲಿಲ್ಲ. ವಿವಿಧ ಜಾನಪದ ಕಲಾವಿದರ ತಂಡಗಳನ್ನು ಕರೆದೊಯ್ದು ಮೈಸೂರು ,ದೆಹಲಿ ಪಾಲ್ಫಾಟ್‌ಗಳಲ್ಲಿ ನೆಡೆದ ಉತ್ಸವಗಳಲ್ಲಿ ಭಾಗವಹಿಸಿ ಬುಡಕಟ್ಟು ಜನಾಂಗಗಳ ಕಲಾ ಪ್ರದರ್ಶನಕ್ಕೆ ಅಣಿವು ಮಾಡಿಕೊಟ್ಟವರು. ಇವುಗಳಲ್ಲಿ ಮುಖ್ಯವಾದುದು ಗೊಂಡರ ಕುಣಿತ, ಸಿದ್ಧಿಗಳ–ಪುಗಡಿ ನೃತ್ಯ, ಕುಣಬಿಗಳ ಹೊಳಿ ಕುಣಿತ ಮತ್ತು ದೀವರ ಮಹಿಳೆಯರ ಕಲಾ ಪ್ರದರ್ಶನಗಳು ದೂರದಶನದಲ್ಲಿಯೂ ಭಾಗಿಯಾಗಿದ್ದಾರೆ. ಚಂದನ ವಾಹಿನಿಯಲ್ಲಿ ಪ್ರಸಾರವಾದ 'ಸಿರಿಗಂಧ' ಕಾರ್ಯಕ್ರಮದ ಮೂಲಕ ಜಾನಪದ ಸರಣಿಯಲ್ಲಿ ಭಾಗವಹಿಸಿ ಕಾರ್ಯನಿರ್ವಹಿಸಿದ್ದಾರೆ.

ಕರ್ನಾಟಕ ವಿ.ವಿ. ಮತ್ತು ಹಂಪಿಯ ಕನ್ನಡ ವಿ.ವಿ.ಗಳಲ್ಲಿ ಕೂಡ ಜಾನಪದ ಕ್ಷೇತ್ರದಲ್ಲಿ ಇವರ ಪ್ರತಿಭೆಯ ನೆರವನ್ನು ಪೂರ್ಣ ಪ್ರಯೋಜನ ಪಡೆದುಕೊಂಡು ಕನ್ನಡ ವಿ.ವಿ. ಕೈಗೊಂಡ 'ಕೃಷಿ ಪದಕೋಶ'ಕ್ಕೆ. ಶಿವಮೊಗ್ಗ ಜಿಲ್ಲೆಯ ತಜ್ಞರಾಗಿ ನೆರವು ಒದಗಿಸಿದ್ದಾರೆ. ಹಾಗೂ ಇದೇ ವಿ.ವಿ.ಯು ಕೈಗೊಂಡ ಬೃಹದ್ಯೋಜನೆಯಾದ ಗ್ರಾಮದೇವತೆಗಳ ಅಧ್ಯಯನಕ್ಕೆ ಶಿವಮೊಗ್ಗ, ಸಾಗರ, ಹೊಸನಗರ, ಸೊರಬ, ಶಿಕಾರಿಪುರ ಕ್ಷೇತ್ರಗಳ ಕಾರ್ಯಕರ್ತರಾಗಿ ದುಡಿದರು. ಕರ್ನಾಟಕ ವಿ.ವಿ. ಸ್ಥಾಪಿಸಿದ ಬುಡಕಟ್ಟು ವಿಭಾಗ ರೂಪುಗೊಳ್ಳುವುದರಲ್ಲಿ ಇವರ ಪ್ರೇರಣೆಯೂ ಇದೆ. ಮೈಸೂರು ವಿ.ವಿ. ಜಾನಪದ ಕುರಿತಂತೆ ಜಾನಪದ ವಿಷಯ ವಿಶ್ವಕೋಶಕಕ್ಕೆ ಲೇಖನಗಳನ್ನು ಒದಗಿಸಿದ್ದಾರೆ.

ಮಾಸ್ತರರು ಜಾನಪದ ಕಲೆಗಳ ಕುರಿತ ಕಾರ್ಯಗಾರ, ವಿಚಾರ ಸಂಕೀರಣಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ ಮಲೆನಾಡ ಜಾನಪದ ವೈವಿದ್ಯತೆ, ಬುಡಕಟ್ಟು ಜನಾಂಗದ ಬದುಕು ಪದ್ದತಿ, ಕಲೆ ಮುಂತಾದ ವಿಷಯಗಳಿಗೆ ಪ್ರಬಂಧ ಮಂಡನೆ ಪ್ರಾತ್ಯಕ್ಷಿಕೆ ಸೃಜನಶಿಲ ಸಾಹಿತ್ಯ ಬರವಣಿಗೆಯಲ್ಲಿಯೂ ತೊಡಗಿಸಿಕೊಂಡು, ಮೌಖಿಕವಾದ ಕೃತಿಗಳನ್ನು ರಚಿಸಿದ್ದಾರೆ. ಬುಡಕಟ್ಟು ಜನಾಂಗದವರ –ಹಸಲರು ಮತ್ತು ಗೊಂಡರು, ವ್ಯಕ್ತಿಗಳ ಸಂದರ್ಶನ, ಕ್ಷೇತ್ರ ಕಾರ್ಯ ಕೈಗೊಂಡು–ಸಾಧನೆಯ ಹರಿಕಾರ ಶ್ರೀ ಕಾಗೋಡು ತಿಮ್ಮಪ್ಪ, ಯುಗದ ಚಿಂತಹ ರಾಮ ಮನೋಹರ ಲೋಹಿಯಾ, ಕಾಗೋಡು ಚಳುವಳಿ, ಚಂದ್ರಗುತ್ತಿ ರೇಣುಕಾಂಬೆ ಜಾತ್ರೆ, ಯಕ್ಷಗಾನ ಮತ್ತು ಆಧುನಿಕತೆ ಹೀಗೆ ಇವು ಸಾಮಾಜಿ ಚರಿತ್ರೆಯಲ್ಲಿ ಶಾಶ್ವತವಾದ ಹೆಜ್ಜೆ ಗುರುತನ್ನು ದಾಖಲಿಸುವ ಕೃತಿಗಳಾಗಿವೆ. ಹಾಗೂ ಮಾಸ್ತರರು ವಿಶ್ವವಿದ್ಯಾನಿಲಯಗಳಲ್ಲಿ ಲಭ್ಯವಿಲ್ಲದ ಅಪರೂಪದ ಆಕರ ಗ್ರಂಥಗಳನ್ನು ಸಂಗ್ರಹಿಸಿದ್ದಾರೆ. ಜಾನಪದ ಅಧ್ಯಯನ ಬುಡಕಟ್ಟು ಅಧ್ಯಯನ, ರಂಗಭೂಮಿ ಇನ್ನಿತರ ವಿಷಯಗಳಲ್ಲಿನ ಸಂಶೋಧಕರಿಗೆ ಸಾಹಿತ್ಯಾಸಕ್ತರಿಗೆ, ಅಕ್ಷರ ಪ್ರಿಯರಿಗೆ ತಮ್ಮ ಮನೆಯೇ ಗ್ರಂಥಾಲಯವಾಗಿಸಿ, ಜ್ಞಾನ ದಾಸೋಹದ ತಾಣವಾಗಿಸಿದರು.

ಜಾನಪದ ಕ್ಷೇತ್ರದಲ್ಲಿ ತೋರಿದ ಇವರ ಸಾಧನೆಯನ್ನು ಗಮನಿಸಿದ ಕರ್ನಾಟಕ ಸರ್ಕಾರವು ಮಾಸ್ತರರನ್ನು ಎರಡು ಅವಧಿಗೆ ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿಯ ಸದಸ್ಯತ್ವವನ್ನು ನೀಡಿ ಗೌರವಿಸಿದೆ. ಇವರ ಜಾನಪದದ ಸೇವಯನ್ನು ಗುರುತಿಸಿ. 1991 ನವೆಂಬರ್ 1 ರಂದು ಕರ್ನಾಟಕ

ಸರ್ಕಾರ ರಂಗಭೂಮಿ ಕ್ಷೇತ್ರದಲ್ಲಿ ಮಾಡಿದ ಅನುಪಮ ಸೇವೆಗೆ ರಾಜ್ಯೋತ್ಸವ ಪ್ರಶಸ್ತಿ 2001 ಫೆಬ್ರವರಿ 11 ರಂದು ಅನಂತ ಸೇವಾ ಟ್ರಸ್ಟ್(ರಿ) ಹೊಸಬಾಳೆ ಸೊರಬ, ಇವರು ಜಾನಪದ ಮತ್ತು ಗಿರಿಜನ ಸೇವೆಗೆ ನೀಡಿದ ಪುರಸ್ಕಾರ 2003 ಮೇ 11 ರಂದು 'ಜನಮನ ಸ್ಪಂದನ ಕನ್ನಡ ಮಾಸ ಪತ್ರಿಕೆಯು ಪ್ರಥಮ ಸಹ್ಯಾದ್ರಿ ಸಾಹಿತ್ಯ ಸಮ್ಮೇಳನದಲ್ಲಿ ಜಾನಪದ ಕ್ಷೇತ್ರಕ್ಕೆ ಸಲ್ಲಿಸಿದ ಅನನ್ಯ ಕೊಡುಗೆಗಾಗಿ 'ಹೃದಯವಂತರು' ಗೌರವ ಪ್ರಶಸ್ತಿ, ನಾಟ್ಯಶ್ರೀ ಕಲಾತಂಡ (ರಿ) ಶಿವಮೊಗ್ಗ 'ಯಕ್ಷ ಬಸವ ಉತ್ಸವ' 2012 ರ ಮಾರ್ಚ್ 4 ರಂದು ಜಗಜ್ಯೋತಿ ಬಸವೇಶ್ವರ ಚರಿತ್ರೆ 100 ನೇ ಪ್ರದರ್ಶನದ ಸಮಾರಂಭದ್ದಲಿ 'ನಾಟ್ಯಶ್ರೀ' ಪ್ರಶಸ್ತಿ, ಅಂತರಾಷ್ಟ್ರೀಯ ಸಾಮಾಜಿಕ ಮತ್ತು ಆರ್ಥಿಕ ಸುಧಾರಣಾ ಸಂಸ್ಥೆ ಬೆಂಗಳೂರು 2017 ಜನವರಿ 28 ರಂದು ಎ.ಡಿ.ಎ ರಂಗಮಂದಿರ ಏರ್ಪಡಿಸಿದ ಸಮಾರಂಭದಲ್ಲಿ 'ಡಾ। ರಾಧಾಕೃಷ್ಣ ಶಿಕ್ಷಣ ರತ್ನ' ಎಂಬ ರಾಷ್ಟ್ರೀಯ ಪ್ರಶಸ್ತಿ, ಕರ್ನಾಟಕ ಸರ್ಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಜನಪದ ವಿಚಾರ ಸಂಕಿರಣ ಜಾನಪದ ಗಾಯನ ಹಾಗೂ ರಾಜ್ಯಮಟ್ಟದ ಜನಪದ ಕಲಾ ಸಂಭ್ರಮ ಮತ್ತು 2017ನೇ ವಾರ್ಷಿಕ ಗೌರವ ಪ್ರಶಸ್ತಿ, ಸಮಾರಂಭ ಡಾ. ಜೀ.ಶಂ.ಪ. ತಜ್ಞ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಹೀಗೆ ವಿವಿಧ ಸೇವಾ ಸಂಸ್ಥೆಗಳು (ಮಾಸ್ತರರನ್ನು) ನೂರುಕ್ಕೂ ಹೆಚ್ಚು ಅಭಿಮಾನ ಬಳಗದೊಂದಿಗೆ ಸಮ್ಮಾನ ಮತ್ತು ಅಭಿನಂದನೆಗಳನನ್ನು ಸಮರ್ಪಣೆಯೊಂದಿಗೆ ಅಭಿಮಾನಿ ನಾಗರೀಕರು ಸೇರಿ 2012 ಮೇ 18 ರಂದು ಅವರ 75ನೇ ವರ್ಷದ ಹುಟ್ಟುಹಬ್ಬದ ಸಂದರ್ಭದಲ್ಲಿ 'ಉರಿಮ ಬೆಳದಿಂಗಳು' ಭಾಗ–1 ಮತ್ತು ಭಾಗ–2 ನ್ನು ಡಾ॥ ಸರ್ಫ್ರಾಜ್ ಚಂದ್ರಗುತ್ತಿ & ವಿಲಿಯಂ ಸಂಪಾದಕತ್ವದಲ್ಲಿ ಮಾಸ್ತರರ ಅಭಿನಂದನಾ ಗ್ರಂಥ ಮಾಲಿಕೆಯನ್ನು ಲೋಕಾರ್ಪಣೆಗೊಳಿಸಲಾಯಿತು. ಹೀಗೆ ಮಾಸ್ತರರು ಸಾಮಾನ್ಯ ಶಾಲಾ ಶಿಕ್ಷಕರಾಗಿದ್ದು ಶಿವರಾಮ ಕಾರಂತರ "ಹುಚ್ಚು ಮನಸ್ಸಿನ ಹತ್ತು ಮುಖಗಳಂತೆ" ಮಾಸ್ತರರ 'ಮುಕ್ತ ಮನಸ್ಸಿನ ಅನಂತ ಮುಖಗಳನ್ನು ನಾವು ಅವರ ಈ ಎಲ್ಲಾ ಸೇವೆಗಳಿಂತ ಗುರುತಿಸಲಾಗಿದೆ. ಬಾಬಾ ಆಮ್ಟೆಯವರು ಹೇಳಿರುವಂತೆ "ಕಾರ್ಯಶೀಲತೆ ಸಮಾಜವನ್ನು ಕಟ್ಟುತ್ತದೆ, ದಾನ ಅದನ್ನು ಹಾಳು ಮಾಡುತ್ತದೆ". ಎಂಬ ಮಾತನ್ನು ಮಾಸ್ತರರು ತಮ್ಮ ಬದುಕಿನಲ್ಲಿ ಪ್ರತಿಫಲಿತಗೊಳಿಸಿದರು. ದಾನ ಕೊಟ್ಟು ಯಾರನ್ನು ಮೇಲತ್ತಬಾರದು ಮಕ್ಕಳಿಗೆ ವಿದ್ಯೆ ಬುದ್ಧಿ ನೀಡಬೇಕು, ಅವರಿಗೆ ಬದುಕುವ ದಾರಿಯನ್ನು ಕಲಿಸಬೇಕು. ಆಗ ಮಾತ್ರವೇ ಅಸಹಾಯಕ ವರ್ಗಗಳು ಉನ್ನತಿಗೆ ಬರಲು ಸಾಧ್ಯ. ಆದ್ದರಿಂದ ಮಾಸ್ತರರು ಬದುಕಿನ ಒಂದು ಭಾಗವಾಗಿ ಹಸಲರು, ಹಕ್ಕಿ ಪಿಕ್ಕಿ, ಹೇಳವ ಮುಂತಾದ ಬುಡಕಟ್ಟು ಸಮುದಾಯಗಳಿಗೆ ಅಕ್ಷರ ಕಲಿಸಿ ಅವರನ್ನು ರಂಗಭೂಮಿ ಮೂಲಕ ಸಮಾಜದ ಮುಖ್ಯವಾಹಿನಿಗೆ ತಂದರು. ಕೋಲಾಟ, ರಂಗಗೀತೆ ಹಾಡುಗಳ ಮೂಲಕ ಅವರಲ್ಲಿ ಜ್ಞಾನ ಬೀಜವನ್ನು ಬಿತ್ತರಿಸಲು ಪ್ರಯತ್ನಿಸಿದರು.

ಹೀಗೆ ಒಂದು ಜಾನಪದ ದೇಶಿ ಸಂಸ್ಕೃತಿಯನ್ನು ಮಾತೃ ಹೃದಯದಿಂದ ಕಂಡು ಶಿಷ್ಟ ಜಗತ್ತಿನೊಂದಿಗೆ ಸಮೀಕರಿಸಲು ಶ್ರಮಿಸಿದರು ಯಾವುದೇ ಸಂಸ್ಕೃತಿಯು ತನ್ನ ಅನನ್ಯತೆಯನ್ನು

ಉಳಿಸಿಕೊಂಡು ಅಭಿವೃದ್ಧಿಯೊಂದಿಗೆ. ಹೆಜ್ಜೆ ಹಾಕಬೇಕಾದರೆ ಅದು ದೇಶಿತನದಾದ ಎಂಬುದನ್ನು ಅಚಲವಾಗಿ ನಂಬಿದರು. ಆಗ ಮಾತ್ರವೇ ಭಾರತೀಯ ಸಂಸ್ಕೃತಿ ಬೆಳೆಯಬಹುದಾಗಿದೆಂದರು. ಆದ್ದರಿಂದ ಇಂದಿಗೂ ಮಾಸ್ತರರು ಸ್ಥಾವರವಾಗದೇ ಜಾನಪದ ಜಂಗಮನಾಗಿ ಜಾನಪದ ಜಗತ್ತಿಗೆ ಗುರುಸ್ಥಾನೀಯರಾಗಿದ್ದಾರೆ. ಇಂತಹ ಅಪರೂಪದ ವ್ಯಕ್ತಿತ್ವ ಹೊಂದಿದ ಮಾಸ್ತರರು ತಮ್ಮ ವೈವಾಹಿಕ ಜೀವನವನ್ನು ಪತ್ನಿ ಮೂರು ಗಂಡುಮಕ್ಕಳು ಹಾಗು ಮೊಮ್ಮಕ್ಕಳೊಂದಿಗೆ ತುಂಬು ಜೀವನವನ್ನು ಪರಿಪೂರ್ಣಗೊಳಿಸಿದ ಮಾಸ್ತರರು ದಿನಾಂಕ : 19–06–2019 ರಂದು ಕನ್ನಡ ನಾಡಿನ ಜಾನಪದ ಸಾರಸ್ವತ ಲೋಕದೀಂದ ಅಗಲಿದರು.

ಹೀಗೆ ನಾಡು ನುಡಿಗಾಗಿ ದುಡಿದ ಇವರ ಬದುಕು–ಬರಹ ಚಿರಕಾಲ ಉಳಿಯುವಂತೆ ಸಾರಸ್ವತ ಲೋಕದಲ್ಲಿ ದಾಖಲಾಗಿರಿಸುವುದು ಹಾಗೂ ಮುಂದಿನ ಯುವ ಜನಾಂಗಕ್ಕೆ ಮಾದರಿಯಾಗಿಸುವುದು ನಮ್ಮೆಲ್ಲರ ಗುರಿಯಾಗಬೇಕು. ಮಲೆನಾಡಿನ ಅಂಬೇಡ್ಕರ್ ಎಂದೇ ಗುರುತಿಸಿಕೊಂಡಿರುವ ಮಾಸ್ತರರು ವಿದ್ಯೆ ಮತ್ತು ಸಂಸ್ಕಾರ ಅಷ್ಟೆಕ್ಕಷ್ಟೆ ಎಂದು ದೂರೀಕರಿಸಿದ ಒಂದು ಸಮುದಾಯದಲ್ಲಿ ಜನಿಸಿ ಇಡೀ ವಿದ್ವತ್ ಲೋಕದ ಕಣ್ಮಣಿಯಾದರು. ಕಾಲದ ಪ್ರವಾಹದುದ್ದಕ್ಕೂ ಅವರ ವಿರುದ್ಧವೇ ಈಜಿದ್ದಾರೆ. ಬದುಕಿನ ಹಲವು ವೈರುದ್ಯಗಳ ನಡುವೆಯೂ ತಮ್ಮ ಸೋಪಜ್ಞತೆ ಮತ್ತು ಅನನ್ಯತೆಯನ್ನು ಕಾಯ್ದುಕೊಂಡು ಆದರ್ಶಗಳಿಗೆ ವಿರುದ್ಧವಾಗಿ ಎಂದಿಗೂ ಎಲ್ಲಿಯೂ ಯಾವುದನ್ನು ಯಾರೊಂದಿಗೂ ರಾಜಿಯಾಗಲಿಲ್ಲ. ಒಬ್ಬ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ತಾನು ಕಂಡ ಹಲವು ಶೋಷಿತ ಬದುಕನ್ನೆ ತನ್ನ ಮೇಲೆ ಅವಾಹಿಸಿಕೊಂಡು, ಜಾನಪದ, ರಂಗಭೂಮಿ, ಅಕಾಡಮೆ ಮತ್ತು ಸಾಹಿತ್ಯ ರಚನೆ ಸಂಶೋದನೆ, ರಾಜಕೀಯ ಹೀಗೆ ಹಲವು ಕ್ಷೇತ್ರಗಳಲ್ಲಿ ತಮ್ಮದೆ ಆದ ಹೆಜ್ಜೆ ಗುರುತನ್ನು ಗುರುತಿಸಿಕೊಂಡಿರುವ ಮಾಸ್ತರರ ವ್ಯಕ್ತಿತ್ವ ಅಸಾಮಾನ್ಯವಾದದ್ದು ಹಾಗೂ ಅನನ್ಯವಾಗಿದೆ.

## ಪರಾಮರ್ಶನ ಗ್ರಂಥಗಳು


1. ಗಂಗಾನಾಯಕ್ ಕೆ.ಎನ್. & ವೃಷಭ್ ಕುಮಾರ್ (ಸಂ) : ಜಾನಪದ ತಜ್ಞರು ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಮೈ.ವಿ.ವಿ. ಮೈಸೂರು.2011.
2. ಚಂದ್ರಶೇಖರ ಕಂಬಾರ.: ಕನ್ನಡಜಾನಪದ ವಿಶ್ವಕೋಶ, ಸಂಪುಟ–2, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು,1985.
3. ಜವರೇಗೌಡ ದೇ.:ಜಾನಪದ ಅಧ್ಯಯನ, ಡಿ.ವಿ.ಕ. ಮೂರ್ತಿ ಪ್ರಕಾಶನ ಮೈಸೂರು,2011.
4. ದಿನೇಶ್ ಕೆ. ತಾಳಗುಪ್ಪ(ಲೇ): ಮರೆತೇನೆಂದರೆ ಮರೆಯಲಿ ಹ್ಯಾಂಗ (ಜಾನಪದ ತಜ್ಞ, ಎನ್. ಹುಚ್ಚಪ್ಪ ಮಾಸ್ತರರ ಜೀವನಗಾಥೆ) ನೇಕಾರ,ಪ್ರಕಾಶನ, ಗುರು ಮಂದಿರ ರಸ್ತೆ, ಸೊರಬ,2014.

5. ಪರಮಶಿವಯ್ಯ ಜೀ.ಶಂ. –ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು, ಅಭಿನವ ಪ್ರಕಾಶನ, ಬೆಂಗಳೂರು, 1979

ಭಟ್ ಜಿ.ಎಸ್. (ಸಂ) ಹಸಲರ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಐ.ಬಿ.ಹೆಚ್. ಪ್ರಕಾಶಕರು. ಬೆಂಗಳೂರು, 1993.

6. ಬೋರಲಿಂಗಯ್ಯ ಹಿ.ಚಿ. (ಸಂ): ಕರ್ನಾಟಕ ಜಾನಪದ ಕಲೆಗಳ ಕೋಶ, ಕನ್ನಡ ವಿಶ್ವವಿದ್ಯಾಲಯ, ಹಂಪಿ, 1999.

7. ರಾಮೇಗೌಡ. : ಜಾನಪದ ಸಂಶೋದನ ತನುಮನ ಪ್ರಕಾಶನ, ಮೈಸೂರು, 1981.

8. ಶಾಂತರಾಜು ಹೆಚ್.ವಿ. : ಪ್ರೋ. ಮಲ್ಲೇಪುರಂ ಜಿ. ವೆಂಕಟೇಶ ಅವರ ಬದುಕು–ಬರಹ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು, 2011.

9. ಸರ್ಫ್ರಾಜ್ ಚಂದ್ರಗುತ್ತಿ & ವಿಲಿಯಂ (ಸಂ) : ಉರಿಯ ಬೆಳದಿಂಗಳು ಭಾಗ–1, ಭಾಗ–2, ನೇಕಾರ ಪ್ರಕಾಶನ, ಸೂರಬ, 2011 .

10. ಸುಷೇಣ ಹೆಚ್.ಎ. : ಜಾನಪದ ಹಾಡುಗಳ ಸಂಗ್ರಹ (ಜಾನಪದ ಕ್ಷೇತ್ರಕಾರ್ಯ) ಡಾ.ಆರ್.ಸಿ. ಹಿರೇಮಠ, ಜಾನಪದ ಅಧ್ಯಯನ, ವಿಭಾಗ, ಕರ್ನಾಟಕ ವಿ.ವಿ. ಧಾರವಾಡ, 2009–10.